‘ಕಾಣದ ಊರಿನ ಇರದ ಬಾವಿಯ ಸಿಗದ ನೀರಿನ’ ಮೂಲಕ ದಾಹವನ್ನು ತಣಿಸಿಕೊಳ್ಳುವಂತೆ ಆಗಿರುತ್ತವೆ. ಇದೇನೂ ನಮ್ಮ ಕಾಲದ ಮನೋಧರ್ಮವಷ್ಟೆ ಅಲ್ಲ; ಎಲ್ಲ ಕಾಲದಲ್ಲೂ ಇಂಥದೊಂದು ಊಹಾಪ್ರಪಂಚದ ಅಧ್ಯಾತ್ಮ ಇದ್ದೇ ಇರುತ್ತದೆ. ಇಲ್ಲಿ ಅಧ್ಯಾತ್ಮ ಎಂದರೆ ಯೋಗ, ತಂತ್ರ ಮುಂತಾದವನ್ನೂ ಸೇರಿಸಿಕೊಳ್ಳಬಹುದೆನಿಸುತ್ತದೆ. ಇಲ್ಲಿ ಝೆನ್‌ಕಥೆಯೊಂದು ನೆನಪಾಗುತ್ತಿದೆ.

ಝೆನ್ ಎಂದರೇನು ಎಂದು ತಿಳಿಯುವ ಉದ್ದೇಶದಿಂದ ಗುರುವಿನಲ್ಲಿಗೆ ಬಂದ ಒಬ್ಬ. ‘ಗುರುಗಳೇ! ಝೆನ್ ಎಂದರೇನು?’ – ಎಂದು ಕೇಳಿದ. ಅದಕ್ಕೆ ಗುರುಗಳು ಕೊಟ್ಟ ಉತ್ತರ: ‘ಹಸಿವಾದಾಗ ತಿನ್ನು, ದಾಹವಾದಾಗ ಕುಡಿ, ನಿದ್ರೆ ಬಂದಾಗ ಮಲಗು.’

ಅಧ್ಯಾತ್ಮ, ಮೋಕ್ಷ, ನಿರ್ವಾಣ, ಸ್ವರ್ಗ, ಪರಲೋಕ, ದೇವರು, ಧರ್ಮ – ಇಂಥ ತತ್ತ್ವಗಳು ನಮ್ಮ ಭಾವ–ಬುದ್ಧಿಗಳನ್ನು ಆಳುತ್ತಲೇ ಇವೆ. ಇದು ಜಗತ್ತಿನ ಎಲ್ಲ ಸಂಸ್ಕೃತಿಗಳಲ್ಲೂ ಸಾಮಾನ್ಯವಾಗಿರುವ ಸಂಗತಿ. ನಮ್ಮ ಪ್ರತ್ಯಕ್ಷ ಕಣ್ಣಿಗೆ ಕಾಣದ ವಿವರಗಳ ಬಗ್ಗೆ ಕುತೂಹಲವೂ ಜಾಸ್ತಿ; ಊಹೆಗಳೂ ಜಾಸ್ತಿ, ಮೌಢ್ಯವೂ ಜಾಸ್ತಿ. ಸತ್ತ ಬಳಿಕ ಸ್ವರ್ಗದಲ್ಲಿ ಏನೇನೋ ಸುಖಗಳು ಸಿಗುತ್ತವೆ ಎಂದು ಈಗ ಇರುವ ಭೂಮಿಯ ಮೇಲೆ ನರಕವನ್ನೇ ಸೃಷ್ಟಿಸುವರಿದ್ದಾರೆ. ಪರಲೋಕಕ್ಕೆ ತೆರಳಿ ಏನೇನೋ ಮಾಡಬೇಕೆಂಬ ಉತ್ಸಾಹದಲ್ಲಿ ಈಗ ಇರುವ ಲೋಕದಲ್ಲಿ ಮಾಡಲೇಬೇಕಾದ ಕರ್ತವ್ಯಗಳನ್ನು ಮರೆಯುವವರಿದ್ದಾರೆ. ದೇವರನ್ನು ಎಲ್ಲೆಲ್ಲೋ ಹುಡುಕುತ್ತಾರೆಯೇ ವಿನಾ, ನಮ್ಮ ಮುಂದೆಯೇ ಪ್ರತ್ಯಕ್ಷವಾಗಿರುವ ದೇವರ ಹಲವು ರೂಪಗಳನ್ನು ಉಪೇಕ್ಷಿಸುತ್ತೇವೆ; ಮೋಕ್ಷ ಎಂದರೆ ಏನು ಎಂದು ಸರಿಯಾಗಿ ಅರ್ಥವಾಗದೆ ಈಗ ದೊರೆಯುತ್ತಿರುವ ಆನಂದವನ್ನು ಆಸ್ವಾದಿಸುವ ಅವಕಾಶವನ್ನೇ ಕಳೆದುಕೊಳ್ಳುತ್ತಿರುತ್ತೇವೆ; ಅಧ್ಯಾತ್ಮ ಎಂದರೆ ಅತೀಂದ್ರಿಯ ಶಕ್ತಿ ಎಂದು

